
# ಶಾಸಕರ ದೂರವಾಣಿ ಭತ್ಯೆ ಪ್ರಶ್ನಿಸಿದ್ದ ಪಿಐಎಲ್ ವಜಾ

ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಜನಪ್ರತಿನಿಧಿಗಳಿಗೆ ದೂರವಾಣಿ ಹಾಗೂ ವೈದ್ಯಕೀಯ ಭತ್ಯೆ ರೂಪದಲ್ಲಿ ಕೋಟ್ಯಂತರ ರೂ. ಸಾರ್ವಜನಿಕ ಹಣ ವ್ಯರ್ಥ ಮಾಡುವುದನ್ನು ತಪ್ಪಿಸಲು ಪರ್ಯಾಯ ವಿಧಾನಗಳನ್ನು ಅಳವಡಿಸಿಕೊಳ್ಳಲು ಸರ್ಕಾರಕ್ಕೆ ನಿರ್ದೇಶಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಕೈಗೆಟುಕುವ ದರದಲ್ಲಿ ದೂರವಾಣಿ ಹಾಗೂ ವೈದ್ಯಕೀಯ ಸೌಲಭ್ಯಗಳು ಸಿಗುತ್ತಿವೆ. ಆದ್ದರಿಂದ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರಿಗೆ ನೀಡುತ್ತಿರುವ ಭತ್ಯೆಗಳ ಬದಲಿಗೆ ಸರ್ಕಾರದ ವತಿಯಿಂದಲೇ ಕಡಿಮೆ ಬೆಲೆಯ ಸೌಲಭ್ಯ ಕಲ್ಪಿಸುವಂತೆ ನಿರ್ದೇಶಿಸಲು ಕೋರಿ ಕೆ.ಬಿ. ವಿಜಯ ಕುಮಾರ್ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಬುಧವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕ್ ಹಾಗೂ ನ್ಯಾಯಮೂರ್ತಿ ಎಚ್.ಟಿ. ನರೇಂದ್ರ ಪ್ರಸಾದ್ ಅವರಿದ್ದ ಪೀಠ, ಅರ್ಜಿದಾರರ ಮನವಿಯು 'ಕರ್ನಾಟಕ ಶಾಸಕಾಂಗ ವೇತನ, ಪಿಂಚಣಿ ಮತ್ತು ಭತ್ಯೆ ಕಾಯ್ದೆ - 1956ರ ಸೆಕ್ಷನ್ 12(5)ಕ್ಕೆ ವಿರುದ್ಧವಾಗಿರುವುದರಿಂದ ಮಾನ್ಯ ಮಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿ ಪಿಐಎಲ್ ವಜಾಗೊಳಿಸಿತು.



ಸದ್ಯ ಎಂಎಲ್ಎ ಹಾಗೂ ಎಂಎಲ್‌ಸಿಗಳಿಗೆ ಸ್ಥಿರ ದೂರವಾಣಿ ಹಾಗೂ ಮೊಬೈಲ್ ಬಳಕೆಗಾಗಿ ಮಾಸಿಕ 20 ಸಾವಿರ ರೂ. ಪಾವತಿಸಲಾಗುತ್ತಿದ್ದು, ರಾಜ್ಯದ 224 ಎಂಎಲ್ಎ ಹಾಗೂ 75 ಎಂಎಲ್‌ಸಿ ಸೇರಿ ಒಟ್ಟು 300 ಜನರಿಗೆ ವಾರ್ಷಿಕ 7.20 ಕೋಟಿ ರೂ. ವೆಚ್ಚವಾಗುತ್ತಿದೆ. ಇದೀಗ ಸರ್ಕಾರಿ ಹಾಗೂ ಖಾಸಗಿ ದೂರವಾಣಿ ಸಂಸ್ಥೆಗಳು ಕಡಿಮೆ ದರದಲ್ಲಿ ಅತ್ಯುತ್ತಮ ಸೌಲಭ್ಯಗಳನ್ನು ಒದಗಿಸುತ್ತಿದ್ದು, ಅದೇ ಸೌಲಭ್ಯಗಳನ್ನು ಜನಪ್ರತಿನಿಧಿಗಳಿಗೆ ಒದಗಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕೆಂದು ಅರ್ಜಿದಾರರು ಮನವಿ ಮಾಡಿದ್ದರು.

## ₹6.5 ಕೋಟಿ ಉಳಿತಾಯ

**ಮೊಬೈಲ್ ಸಂಸ್ಥೆಗಳು ಕೇವಲ 1,500 ರೂ. ಗೆ ಒಂದು ವರ್ಷದ ಅವಧಿಗೆ ಅನಿಯಮಿತ ಕರೆಗಳು, ಪ್ರತಿದಿನ 100 ಉಚಿತ ಎಸ್ಎಂಎಸ್ ಹಾಗೂ 1.2 ಜಿಬಿ ಇಂಟರ್‌ನೆಟ್ ಡೇಟಾ ಸೌಲಭ್ಯ ನೀಡುತ್ತಿವೆ. ಸರ್ಕಾರಿ ಸ್ವಾಮ್ಯದ ಬಿಎಸ್ಎನ್ಎಲ್ ಮಾಸಿಕ ಕೇವಲ 777 ರೂ. ಗೆ ಉಚಿತ ಕರೆಗಳು, ಇಂಟರ್‌ನೆಟ್ ಹಾಗೂ ವೈಫೈ ವ್ಯವಸ್ಥೆ ಕಲ್ಪಿಸುತ್ತಿದೆ. ಪ್ರತಿ ಸದಸ್ಯರಿಗೂ ಸ್ಥಿರ ದೂರವಾಣಿಗೆ ಹೆಚ್ಚೆಂದರೆ ವಾರ್ಷಿಕ 12 ಸಾವಿರ ರೂ., ಮೊಬೈಲ್ ಬಿಲ್‌ಗೆ ವಾರ್ಷಿಕ 1,500 ರೂ.ಗೆ ಉತ್ತಮ ಸೌಲಭ್ಯ ಕಲ್ಪಿಸಿದರೆ, ವಾರ್ಷಿಕ 40,50,000 ರೂ ವೆಚ್ಚವಾಗಲಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ವಾರ್ಷಿಕ 6,79,50,000 ರೂ. ಉಳಿತಾಯವಾಗಲಿದೆ ಎಂದು ಅರ್ಜಿಯಲ್ಲಿ ಹೇಳಲಾಗಿತ್ತು.**